March 2019 Reg. No. ..................................... **FY 16**

Name ..........................................

## Part - III

## KANNADA (OPTIONAL)

Maximum : 80 Scores

Time : 2½ Hours

Cool off time : 15 Minutes

***General Instructions to Candidates :***

- There is a 'Cool off time' of 15 minutes in addition to the writing time.
- Use the 'Cool off time' to get familiar with questions and to plan your answers.
- Read the instructions carefully.
- Read the questions carefully before answering.
- Calculations, figures and graphs should be shown in the answer sheet itself.
- Give equations wherever necessary.
- Electronic devices except nonprogrammable calculators are not allowed in the Examination Hall.

**1 ರಿಂದ 4 ರವರೆಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ.** **(4 × 1 = 4)**

**1.** 'ದಯವೇ ಧರ್ಮದ ಮೂಲವಯ್ಯ' – ಇದು ಯಾರ ವಚನದ ಸಾಲಾಗಿದೆ?
(ಅಕ್ಕಮಹಾದೇವಿ, ಬಸವಣ್ಣ, ಜೇಡರ ದಾಸಿಮಯ್ಯ, ಎಸ್.ವಿ. ಪರಮೇಶ್ವರ ಭಟ್ಟ.)

**2.** 'ಕನ್ನಡದ ಪ್ರಥಮ ರಾಷ್ಟ್ರಕವಿ' ಯೆಂದು ಪ್ರಸಿದ್ಧರಾದವರು ಯಾರು?
(ದ.ರಾ.ಬೇಂದ್ರೆ, ಕೆ.ಎಸ್.ನರಸಿಂಹಸ್ವಾಮಿ, ಗೋವಿಂದ ಪೈ, ಸು.ರಂ.ಎಕ್ಕುಂಡಿ)

**3.** ಈ ಕೆಳಗಿನ ಹೇಳಿಕೆಗಳಲ್ಲಿ ಕೀರ್ತನೆಗಳಿಗೆ ಸಂಬಂಧಿಸಿ ಸರಿಹೊಂದುವುದು ಯಾವುದು?
(16 ನೇ ಶತಮಾನದಲ್ಲಿ ಹುಟ್ಟಿಕೊಂಡಿದೆ, ಕೀರ್ತನೆಗಳು ಛಂದೋಬದ್ಧವಾಗಿದೆ, ಗದ್ಯರೂಪದಲ್ಲಿದೆ, ಹಳೆಗನ್ನಡ ಭಾಷೆಯಲ್ಲಿದೆ)

**4.** ಪುರಂದರದಾಸರ ಕೀರ್ತನೆಯಲ್ಲಿ ಮಾತಾಪಿತರನು ಬಳಲಿಸಿದಾತನು ಈ ಕೆಳಗಿನ ಯಾವ ಸತ್ಕಾರ್ಯ ಮಾಡಿದರೆ ಪ್ರಯೋಜನವಿಲ್ಲ ಎಂದಿದ್ದಾರೆ?
(ನಟನೆ, ಪಠನೆ, ಯಾತ್ರೆಯ, ವ್ರತಗಳ)

**5 ರಿಂದ 10 ರವರೆಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ.** **(6 × 1 = 6)**

5. ಕಳವೆ, ಗಡಣ – ಈ ಪದಗಳ ಅರ್ಥವನ್ನು ಬರೆಯಿರಿ.

6. ಮ್ಯಾಗಿನ, ಕ್ವಾಪದಿಂದ – ಶಿಷ್ಟರೂಪಕ್ಕೆ ಪರಿವರ್ತಿಸಿರಿ.

7. ಕಷ್ಟಸುಖಗಳು – ವಿಗ್ರಹವಾಕ್ಯ ಮಾಡಿ ಸಮಾಸವನ್ನು ಹೆಸರಿಸಿರಿ.

8. ಕೆಳಗೆ ಕೊಟ್ಟಿರುವ ವಾಕ್ಯದಲ್ಲಿ ಅಡಿಗೆರೆ ಎಳೆದ ಪದದಲ್ಲಿರುವ ವಿಭಕ್ತಿ ಪ್ರತ್ಯಯವನ್ನು ಗುರುತಿಸಿ ಹೆಸರಿಸಿರಿ.
   ಶಕುಂತಲೆಗೆ ಆದ ಅವಮಾನದ ಕತೆಯನ್ನು ಕೇಳಿ ಆಶ್ರಮವಾಸಿಗಳೆಲ್ಲ ನೊಂದರು.

9. ಸ್ನೇಹ, ವನ – ಈ ಪದಗಳ ತದ್ಭವ ರೂಪವನ್ನು ಬರೆಯಿರಿ.

10. ರೂಢನಾಮಕ್ಕೆ ಒಂದು ಉದಾಹರಣೆಯನ್ನು ಕೊಡಿರಿ.

**11 ರಿಂದ 13 ರವರೆಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿರಿ.** **(3 × 3 = 9)**

11. ಕೆಳಗಿನ ಮಿಶ್ರವಾಕ್ಯವನ್ನು ಮೂರು ಸರಳ ವಾಕ್ಯಗಳಾಗಿ ವಿಂಗಡಿಸಿ ಬರೆಯಿರಿ.
    ಸುದ್ದಿಗಳನ್ನು ಜನರಿಗೆ ತಿಳಿಸುವುದು ಪತ್ರಿಕೆಗಳ ಮೊದಲ ಕರ್ತವ್ಯವಾಗಿದ್ದು ಒಬ್ಬ ಪತ್ರಕರ್ತನು ಸಮಾಜದಿಂದ ಸುದ್ದಿಯನ್ನು ಆರಿಸಿ, ವರದಿಯ ರೂಪದಲ್ಲಿ ಬರೆದು, ಪತ್ರಿಕೆಗಳ ಮೂಲಕ ಸಮಾಜಕ್ಕೆ ಒದಗಿಸುತ್ತಾನೆ.

12. ಕೆಳಗೆ ಕೊಡಲಾದ ಜನಪದ ತ್ರಿಪದಿಯ ಆಶಯವನ್ನು ಬರೆಯಿರಿ.
    ಬಾಳುವೆ ಮಾಡಿದರೆ ಬಾ ತಂಗಿ ಅಂದಾರು
    ಬಾಳುವೆಗೆಟ್ಟು ಮತಿಗೆಟ್ಟು ತಿರುಗಿದರೆ
    ಹೆತ್ತವರ ಕುಲಕ್ಕೆ ಹಗೆಯಾದೆ.

13. ನಿರ್ಮಲವಾದ ಭಕ್ತಿಗೆ ನಿರ್ದಿಷ್ಟವಾದ ಸ್ವರೂಪವಿಲ್ಲ ಎಂಬುದನ್ನು ಎಸ್.ವಿ.ಪರಮೇಶ್ವರ ಭಟ್ಟರು ತಮ್ಮ ವಚನಗಳಲ್ಲಿ ಸ್ಪಷ್ಟಪಡಿಸಿದ ಬಗೆಯನ್ನು ಬರೆಯಿರಿ.

**14 ರಿಂದ 18 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 4 ಪ್ರಶ್ನೆಗಳಿಗೆ ಉತ್ತರಿಸಿರಿ. (4 × 4 = 16)**

**14.** ಉತ್ರಾಜಿಯ ಜೀವನ ದುರಂತಮಯವಾಗಿ ಪರಿಣಮಿಸಲು ಉಂಟಾದ ಕಾರಣಗಳ ಕುರಿತು ಕಿರುಟಿಪ್ಪಣಿ ಬರೆಯಿರಿ.

**15.** ನಿಮ್ಮ ಶಾಲೆಯ ಸಮೀಪ ಅವಗಣಿಸಲ್ಪಟ್ಟ ದೊಡ್ಡದಾದ ಕೆರೆಯೊಂದಿದೆ. ಅದನ್ನು ದುರಸ್ತಿಗೊಳಿಸಿ ಊರಿನ ಜನರಿಗೆ ನೀರನ್ನು ಬಳಸಿಕೊಳ್ಳಲು ಅನುಕೂಲ ಮಾಡುವಂತೆ ಒತ್ತಾಯಿಸಿ ಜಿಲ್ಲಾ ಪಂಚಾಯತ್ ಅಧ್ಯಕ್ಷರಿಗೆ ಮನವಿಪತ್ರವೊಂದನ್ನು ಸಿದ್ಧಪಡಿಸಿರಿ.

**16.** ಅಡವಿರಾಮುಡು ಸಿನೆಮಾ ನೋಡಲು ಬಸ್ಸೇರಿದ ಪೆಂಟಯ್ಯನ ಕನಸು ಭಗ್ನಗೊಂಡ ಬಗೆಯನ್ನು ಪಾಠಭಾಗದ ಹಿನ್ನೆಲೆಯಲ್ಲಿ ವಿವರಿಸಿರಿ.

**17.** ಒಂದು ಭಾಷೆಗೆ ಅದರದ್ದೇ ಆದ ಪ್ರಾಚೀನತೆ, ಇತಿಹಾಸಗಳಿರುತ್ತವೆ. ಈ ನೆಲೆಯಲ್ಲಿ ನೀವು ಓದಿದ ಪಾಠದ ಆಧಾರದಲ್ಲಿ ಕನ್ನಡ ಭಾಷೆಯ ಬೆಳವಣಿಗೆಯ ಕುರಿತು ಕಿರು ಟಿಪ್ಪಣಿಯೊಂದನ್ನು ಬರೆಯಿರಿ.

**18.** ಬದುಕಿನಲ್ಲಿ ಸ್ತುತಿ-ನಿಂದೆಗಳನ್ನು ಸಹನೆಯಿಂದ ಕಾಣಬೇಕು ಎಂಬುದನ್ನು ಅಕ್ಕ ಮಹಾದೇವಿಯು ಯಾವೆಲ್ಲಾ ನಿದರ್ಶನಗಳ ಮೂಲಕ ಸಮರ್ಥಿಸಿದ್ದಾರೆ? ಸ್ಪಷ್ಟಪಡಿಸಿರಿ.

**19 ರಿಂದ 24 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 5 ಪ್ರಶ್ನೆಗಳಿಗೆ ಉತ್ತರಿಸಿರಿ. (5 × 5 = 25)**

**19.** ತನ್ನನ್ನು ತಾನು ತಿದ್ದಿಕೊಳ್ಳದೆ ಮಾಡುವ ಭಕ್ತಿ ಆಚರಣೆಗಳೆಲ್ಲ ವ್ಯರ್ಥ ಎಂಬುದನ್ನು 'ಬೇವು ಬೆಲ್ಲದೊಳಿಡಲೇನು ಫಲ' ಕೀರ್ತನೆಯ ಆಧಾರದಲ್ಲಿ ವಿವರಿಸಿರಿ.

**20.** ಹಾಲನ್ನು ಬಯಸಿದ ಮಗನಿಗೆ ಹಾಲನ್ನು ನೀಡಲಾರದೆ ಅಸಹಾಯಕರಾದ ಹೆತ್ತವರ ನೋವು 'ಅಶ್ವತ್ಥಾಮ' ಕವಿತೆಯಲ್ಲಿ ವ್ಯಕ್ತವಾದ ಬಗೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**21.** ಮಕ್ಕಳ ಬಗ್ಗೆ ಹೆತ್ತವರಿಗಿರುವ ಕಾಳಜಿ ಮತ್ತು ತಳಮಳ 'ಬೆಳಸು' ಕವಿತೆಯಲ್ಲಿ ಮೂಡಿಬಂದ ಬಗೆಯನ್ನು ವಿವರಿಸಿರಿ.

**22.** ಚಂದ್ರಗುಪ್ತನು ಪಂಜರದ ರಹಸ್ಯವನ್ನು ಭೇದಿಸಿದ ಬಗೆ ಯಾವುದು? ನಿಮ್ಮ ಮಾತುಗಳಲ್ಲಿ ನಿರೂಪಿಸಿರಿ.

**23.** ಒಬ್ಬಳು ಹೆಣ್ಣಿಗೆ ತವರಿನ ಬಗೆಗೆ ಪ್ರೀತಿ, ಸ್ನೇಹ, ಆತ್ಮೀಯತೆಗಳಿರುವುದು ಸಹಜ. ಈ ಹಿನ್ನೆಲೆಯಲ್ಲಿ 'ಹೇಮಕೂಟದಿಂದ ಬಂದ ಮೇಲೆ' ಪಾಠಭಾಗದ ಮಾಹಿತಿಗಳನ್ನು ಬಳಸಿಕೊಂಡು ಶಕುಂತಲೆಯ ಪಾತ್ರಚಿತ್ರಣವನ್ನು ಮಾಡಿರಿ.

**24.** 'ಬೆಳಗಿನ ಜಾವದಲ್ಲಿ ಏಳುವುದು ಉತ್ತಮ ಹವ್ಯಾಸ' ಈ ಆಶಯವನ್ನು ಸಮರ್ಥಿಸಿಕೊಂಡು ಪತ್ರಿಕೆಯಲ್ಲಿ ಪ್ರಕಟಿಸಲು ಕಿರು ಲೇಖನವೊಂದನ್ನು ಬರೆಯಿರಿ.

**25 ರಿಂದ 27 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 2 ಪ್ರಶ್ನೆಗಳಿಗೆ ಉತ್ತರಿಸಿರಿ.** **(2 × 6 = 12)**

**25.** ನೀವು ಓದಿದ ಪಾಠಭಾಗದ ಮಾಹಿತಿಗಳನ್ನು ಬಳಸಿಕೊಂಡು ಕಾಸರಗೋಡು ಹಾಗೂ ಕರಾವಳಿ ಕರ್ನಾಟಕದ ಜನಪ್ರಿಯ ಕಲೆಯಾದ ಯಕ್ಷಗಾನದ ಪರಿಚಯವನ್ನು ನೀಡುವ ಲೇಖನವೊಂದನ್ನು ಸಿದ್ಧಪಡಿಸಿರಿ.

**26.** 'ವೈಶಾಖ ಪೂರ್ಣಿಮಿಯ ಮಾರ್ತಂಡನುದಯಿಸಿದಂ' ಕಾವ್ಯಭಾಗದಲ್ಲಿ ಬುದ್ಧ ಹಾಗೂ ಆನಂದರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿರಿ.

**27.** 'ಬಯಸದೆ ಬಂದ ಭಾಗ್ಯ' ಈ ಗಾದೆಮಾತಿನ ಹಿನ್ನೆಲೆಯಲ್ಲಿ 'ಬಾಶಿಂಗಬಲ'ದ ಕಥೆಯನ್ನು ಸಂಕ್ಷೇಪವಾಗಿ ಬರೆಯಿರಿ.

**28 ರಿಂದ 29 ರವರೆಗಿನ ಪ್ರಶ್ನೆಗಳಲ್ಲಿ ಯಾವುದಾದರೂ 1 ಪ್ರಶ್ನೆಗೆ ಉತ್ತರಿಸಿರಿ.** **(1 × 8 = 8)**

**28.** ಸಮಾಜದಲ್ಲಿನ ಸ್ತ್ರೀಯರ ಅಸಹಾಯಕತೆಯು 'ಚಂದ್ರಗಿರಿಯ ತೀರದಲ್ಲಿ' ಪಾಠಭಾಗದಲ್ಲಿ ನಿರೂಪಿತವಾದ ಬಗೆಯನ್ನು ನಿಮ್ಮ ಮಾತುಗಳಲ್ಲಿ ಸ್ಪಷ್ಟಪಡಿಸಿರಿ.

**29.** 'ಪೆಟ್ರೋಮ್ಯಾಕ್ಸ್' ಕವಿತೆಯಲ್ಲಿ ಅಶಿಕ್ಷಿತ ಹಾಗೂ ಬಡಜನರು ಬದುಕಿನುದ್ದಕ್ಕೂ ಕಷ್ಟಗಳ ಕತ್ತಲೆಯಲ್ಲೇ ತಮ್ಮ ಬದುಕನ್ನು ಕಳೆಯುತ್ತಾರೆ ಎಂಬ ಆಶಯವನ್ನು ಕಾಣುತ್ತೇವೆ. 'ಬಡತನ ಬಗೆಹರಿಯದ ಸಮಸ್ಯೆ' ಎಂಬ ವಿಷಯದಲ್ಲಿ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನವೊಂದನ್ನು ತಯಾರಿಸಿರಿ.